

# ಸಣ್ಣ ವ್ಯಾಪಾರಿಗಳ ಮೇಲೆ ಕಣ್ಣಿಡುವ ಕಾನಾನ್ ದೇಶದ ದುರಾತ್ಮಗಳು



## ನುಡಿಯಲ್ಪಟ್ಟ ಪ್ರವಾದನೆ

ನೆರ್ಶೂಷ್ ಮತ್ತು ನಿರ್ಷಿಯ ಎಂಬ ಕಾನಾನ್ ದೇಶದ ದುರಾತ್ಮಗಳೆರಡು ಭಾರತದಲ್ಲಿ ಕಾರ್ಯಮಾಡಲು ಕಾದಿದೆ. ಈ ದುರಾತ್ಮಗಳೆರಡು ವ್ಯಾಪಾರಿಗಳ ಮೇಲೆ ಕಣ್ಣಿಟ್ಟು, ಇವರ ವ್ಯಾಪಾರಗಳನ್ನು ನಿರ್ನಾಮಗೊಳಿಸುವದಕ್ಕೂ, ವ್ಯಾಪಾರಸ್ತರ ಕುಟುಂಬವನ್ನು ಹತ್ಯೆಮಾಡುವದಕ್ಕೂ, ಅವರನ್ನು ಆತ್ಮಹತ್ಯೆಮಾಡುವದಕ್ಕೆ ಪ್ರೇರೆಪಿಸುವದಕ್ಕೂ, ಅವರ ಕುಟುಂಬಗಳನ್ನು ಬೇರ್ಪಡಿಸುವದಕ್ಕೂ, ಕೇಡನ್ನು, ಕಿರುಕುಳಗಳನ್ನೂ ಅವರ ನಡುವೆ ಉಂಟುಮಾಡುವದಕ್ಕೂ, ಅವರ ವಸ್ತ್ರಗಳನ್ನು ಅಪಹರಿಸುವದಕ್ಕೂ, ಆಡಳಿತ ಮಾಡುವವರೊಂದಿಗೂ, ಅರಸರೊಂದಿಗೂ, ಭೂಲೋಕದ ದೊಡ್ಡ ದೊಡ್ಡ ವ್ಯಾಪಾರಿಗಳೊಂದಿಗೂ ಕೈಜೋಡಿ ನಿಂತ್ತಿದೆ. ಮುಂಬರುವ ದಿನಗಳಲ್ಲಿ ಅವು ಬಹುತೀವ್ರವಾಗಿ ಕಾರ್ಯಮಾಡಲಿದೆ. ಎಂದು ಸೇನಾಧೀಶ್ವರನಾದ ಯೆಹೋವನು ನುಡಿಯುತ್ತಾನೆ. ಮತ್ತೂ ಬೆಟ್ಟಗಳಲ್ಲಿ ಜೀವಿಸುವವರೂ, ಬೆಟ್ಟಗಳನ್ನು ಜೀವನಾಧಾರವನ್ನಾಗಿ ಮಾಡಿಕೊಂಡಿರುವವರ ಜೀವನಾಧಾರವನ್ನು ಭಾದಿಸುವದಕ್ಕಾಗಿಯೂ, ಬರವನ್ನೂ, ಹಿಬ್ಬನಿಯನ್ನೂ, ವಿಷಬೀಜಗಳನ್ನೂ, ಚಳಿಗಾಲದಲ್ಲಿ ವೈರುಗಳನ್ನು ಒಣಗಿಸುತ್ತದೆ. ವಿಪತ್ತುಗಳನ್ನು ಉಂಟುಮಾಡುವಂತ ಕಾರ್ಯಗಳನ್ನು ಆರಂಭಿಸಿ, ಬೆಟ್ಟದ ಪ್ರದೇಶಗಳನ್ನು ಬೋಳುಗುಡ್ಡವನ್ನಾಗಿ ಮಾಡುತ್ತದೆ. ಮತ್ತೂ ಅವರ ಮೇಲೆ ಉಂಟಾಗುವಂತ ಕೆಲವು ದುಷ್ಕೃತ್ಯಗಳು, ತಂತ್ರಗಳು, ದುರ್ಜನರಿದಂದ ಎಸಗುವದರಿಂದ ಬಹುಜನರು ಬೆಟ್ಟದಿಂದ ಬೆಟ್ಟದತಪ್ಪಲಿಗೆ ಓಡಿಬರಲಿದ್ದಾರೆ. ತಮ್ಮ ಜೀವನಾಂಶಕ್ಕಾಗಿ ಕೆಳಗಿಳಿದು ತಪ್ಪಲಿಗೆ ಬಂದು, ಅದು ದೊರೆಯದೆ ಇರುವದರಿಂದ, ತಮ್ಮ ಜೀವವನ್ನು ನಾಶಮಾಡಿಕೊಳ್ಳಲಿದ್ದಾರೆ. ಬೆಟ್ಟಗಳ ಮೇಲೆ ಗುರಿಯಿಟ್ಟು ಪ್ರಾರ್ಥಿಸಿರಿ. ಅದರ ಮಧ್ಯದಲ್ಲಿ ವಿಪತ್ತುಗಳು, ಭಯೋತ್ಪಾದನೆಗಳು, ನಾಶನಗಳು, ದುಷ್ಟ ಸೈತಾನನಿಂದ ಆಯಾಯ ತಂತ್ರಗಳು ಉಂಟುಮಾಡಲ್ಪಡುತ್ತದೆ ಎಂದು ದೇವರಾದ ಕರ್ತನು ನುಡಿಯುತ್ತಾನೆ. (ಪ್ರಕಟನೆ ದಿನ :2017 ನಾಲುಮಾವಡಿ)

## ವಿವರಣೆ

ದೇಶದಲ್ಲಿ ಸಣ್ಣ ವ್ಯಾಪಾರಿಗಳನ್ನು ಕಣ್ಣಿಟ್ಟು ನಡೆಸುವಂತ ಕಾರ್ಯಗಳು ಇಂದಿಗೆ ದೇಶದಲ್ಲಿ ಸಣ್ಣ ವ್ಯಾಪಾರಿಗಳ ಗುಂಪು ನಾಶವಾಗುತ್ತದೆಯೋ ಎಂಬಂತ ಭಯವು ಉಂಟಾಗುತ್ತಿದೆ. ಸಣ್ಣ ವ್ಯಾಪಾರಗಳನಿಟ್ಟು ಜೀವನಸಾಗಿಸುವವರನ್ನು ಸ್ವಲ್ಪ ಸ್ವಲ್ಪವಾಗಿ ಇಂಗಿಸುತ್ತಿದ್ದಾರೆ. ಅದರಂತೆ, ಒಂದು ಕಾಲದಲ್ಲಿ ಬೆಟ್ಟದ ವ್ಯವಸಾಯಗಳಾದ ಕಾಫಿ, ತೈಲಾಗಳಂತಹ ವ್ಯವಸಾಯಗಳು ಅಳಿದುಬರುತ್ತಲಿವೆ. ಇವುಗಳನ್ನು ಅಳಿಸಿ ದೇಶಕ್ಕೆ ಕ್ಷಾಮವನ್ನುಂಟುಮಾಡಲು ಕಾರ್ಯಮಾಡುತ್ತಿರುವ ಕಾನಾನ್ ದೇಶದ ಆತ್ಮಗಳನ್ನು ಕಟ್ಟಿಹಾಕಿ ಪ್ರಾರ್ಥಿಸಿರಿ.

### ಪ್ರಾರ್ಥನಾ ಮನವಿ

01. ವ್ಯಾಪಾರಿಗಳನ್ನು ಕಣ್ಣಿಟ್ಟು ಅವರ ಕುಟುಂಬಗಳನ್ನು ಹತ್ಯೆಮಾಡುವಂತೆ ಎದ್ದಿರುವಂತ ನೆರ್ಶೂಷ್ ಎಂಬ ಕಾನಾನ್ ದೇಶದ ಆತ್ಮಗಳನ್ನು ಕಟ್ಟಿಹಾಕಿ. ದುರಾತ್ಮಗಳ ಕಾರ್ಯಗಳನ್ನು ನಾಶಗೊಳಿಸಿ ಪ್ರಾರ್ಥಿಸಿರಿ.

02. ಬೆಟ್ಟಗಳಲ್ಲಿ ಜೀವಿಸುವವರ ಜೀವಾನಾಧಾರಗಳು ಭಾದಿಸುವದಕ್ಕಾಗಿಯೂ, ಬರಗಳು, ವಿಷಬೀಜಗಳು, ಚಳಿಗಾಲದಲ್ಲಿ ಉಂಟಾಗಿರುವ ಆಪತ್ತುಗಳನ್ನು ಉಂಟುಮಾಡಿ ನಾಶಗೊಳಿಸುವ ಸೈತಾನನ ಕಾರ್ಯಗಳನ್ನು ನಾಶಗೊಳಿಸಿ ಪ್ರಾರ್ಥಿಸಿರಿ.

03. ಬೆಟ್ಟದ ಪ್ರದೇಶದಲ್ಲಿ ಜೀವಿಸುವ ವ್ಯಾಪಾರಸ್ತರ ಜೀವನಾಧಾರಗಳು ಸಮೃದ್ಧಿಹೊಂದಬೇಕು. ಅವರು ಕೈಯಿಟ್ಟು ಮಾಡುವ ವ್ಯಾಪಾರಗಳಲ್ಲಿ ನಷ್ಟಗಳು ಉಂಟಾಗದಂತೆ ಪ್ರಾರ್ಥಿಸಿರಿ.

04. ಬೆಟ್ಟಗಳನ್ನು ಕಣ್ಣಿಟ್ಟು ಪ್ರಾರ್ಥಿಸಿರಿ. ಅದರ ನಡುವೆ ಆಪತ್ತುಗಳು, ಭಯೋತ್ಪಾದನೆಗಳು, ಕಿರುಕುಳಗಳು, ಬರಗಳು, ಬಹುತೀವ್ರವಾಗಿ ಬರಲು ಸಿದ್ಧವಿದೆ. ಕೆಡುಕನಾದ ಸೈತಾನನಿಂದ ಉಂಟಾಗುತ್ತಲಿದೆ ಎಂದು ದೇವರಾದ ಕರ್ತನು ನುಡಿಯುತ್ತಾನೆ. ಆದರಿಂದ ವೈರಿಯ ತಂತ್ರಗಳಲ್ಲವು ನಾಶವಾಗಿ ಹೋಗುವಂತೆ ಪ್ರಾರ್ಥಿಸಿರಿ.

05. ವ್ಯಾಪಾರಸ್ಥರನ್ನೂ ಅವರ ಕುಟುಂಬಗಳನ್ನೂ, ಅವರ ವ್ಯಾಪಾರಗಳನ್ನೂ, ಕುಂದಿಸುವಂತೆಯೂ, ವ್ಯಾಪಾರಸ್ಥರ ಕುಟುಂಬಗಳನ್ನು ಹತ್ಯೆಮಾಡುವದಕ್ಕಾಗಿಯೂ, ಕುಟುಂಬಗಳನ್ನು ಅಗಲಿಸುವದಕ್ಕಾಗಿಯೂ, ಸೈತಾನನು ಬಲವಾಗಿ ಕಾರ್ಯಮಾಡುತ್ತಲಿದ್ದಾನೆ. ಇಂತಹ ಕೇಡಿನ ಕಾರ್ಯಗಳಲ್ಲಿ ಒಬ್ಬ ವ್ಯಾಪಾರಿಗಳು ನಾಶವಾಗದಂತೆ ಪ್ರಾರ್ಥಿಸಿರಿ.